ರೂಪುಗೊಳ್ಳುವ ಯೋಜನೆ ಏನು ಎನ್ನುವುದನ್ನು ಹೇಳಿದ್ದಾರೆ. ಅದು ರೂಪುಗೊಳ್ಳುವವರೆಗೆ ಕೊನೇ ಪಕ್ಷ, ಮಂಡಲ್ ಮಟ್ಟದಲ್ಲಿ ರೂಪುಗೊಳ್ಳುವವರೆಗೆ ಈ ಯೋಜನೆಯನ್ನು ಸ್ಟಾಪ್ ಮಾಡಿಸಲಿ. ಯಾರಿಗೆ ಈ ಯೋಜನೆ. ನಾವು ಇವತ್ತು ಪ್ರಿಮಿಯಮನ್ನು ಕಲೆಕ್ಟ್ ಮಾಡಿ, ಎಮಾ ಸಂಸ್ಥೆಗಳು ಹೊಟ್ಟೆಹೊರಿಯುವುದು. ಎಮಾ ಸಂಸ್ಥೆಗಳಲ್ಲಿರುವ ಕೆಲಸಗಾರರಿಗೆ, ಸಂಬಳ ಕೊಡುವುದಕ್ಕೆ ರೈತರು ಪ್ರೀಮಿಯಂ ಕೊಡುವುದಾದರೆ, ಇದು ರೈತರ ಎಮಾ ಯೋಜನೆ ಅಲ್ಲ. ಬೇಸಾಯದ ಬೆಳೆಯ ಎಮಾ ಯೋಜನೆ ಅಲ್ಲ. ಇದರ ಬಗ್ಗೆ ಸರ್ಕಾರ ದೀರ್ಘವಾದ ಚಿಂತನೆ ನಡೆಸಬೇಕು. ಕೇಂದ್ರ ಸರ್ಕಾರದ ಗಮನವನ್ನು ಸೆಳೆಯಬೇಕೆಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಮಾನ್ಯ ಅಧ್ಯಕ್ಷರೇ, ಈಗಿರತಕ್ಕ ಪದ್ಧತಿಯಲ್ಲಿ ನಮ್ಮ ರಾಜ್ಯದಲ್ಲಿ ೧೯೮೫-೮೬ರಿಂದ ವ್ಯಾಪಕ ಬೆಳೆ ಎಮಾ ಯೋಜನೆಯನ್ನು ಜಾರಿಗೊಳಿಸಿಕೊಂಡು ಬರಲಾಗುತ್ತಿದೆ. ಜಾರಿಯಲ್ಲಿರತಕ್ಕ ಪದ್ಧತಿಯಲ್ಲಿ ಅನೇಕ ದೋಷಗಳಿವೆ. ಒಟ್ಟು ತಾಲ್ಲೂಕಿನ ಯಾವುದೋ ಒಂದು ಭಾಗದಲ್ಲಿ ತೊಂದರೆ ಇದ್ದು, ಅವರು ನಮಗೆ ರಿಯಾಯಿತಿ ಕೊಡಬೇಕು, ಇದು ನಮಗೆ ಅನ್ವಯಿಸುವಹಾಗೆ ಮಾಡಿಕೊಡಬೇಕು ಎಂದು ಕೇಳಿದರೆ, ಇಡೀ ತಾಲ್ಲೂಕಿನಲ್ಲಿ ಯಾವುದೋ ಮೂಲೆಯಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಿ, ಆ ಅಂಕಿ ಅಂಶಗಳ ಆಧಾರದ ಮೇಲೆ, ಇದನ್ನು ಕೊಡಬೇಕಾಗುತ್ತದೆ. ಈಗಿರುವ ಪದ್ಧತಿ ಪ್ರಕಾರ. ಅದಕ್ಕೆ ನಾವು ಈ ಪದ್ಧತಿಯನ್ನು ಬದಲಾವಣೆ ಮಾಡಿ ಪ್ರತಿಯೊಂದು ಮಂಡಲಕ್ಕೂ ಸಂಬಂಧಪಟ್ಟಹಾಗೆ, ಯಾವ ಯಾವ ಬೆಳೆಗಳಿಗೆ, ಏನು ತೊಂದರೆಯಾಗಿದೆ, ಎಷ್ಟೆಷ್ಟು ಬೆಳೆ ಬಂದಿದೆ ಎಂಬುದನ್ನೆಲ್ಲಾ ನಾವು ನಿರ್ಧಾರವಾಗಿ ಅಂಕಿಅಂಶಗಳ ಸಮೇತ ತಿಳಿದುಕೊಂಡು ಆಮೇಲೆ ಇದನ್ನು ಜಾರಿಗೆ ಕೊಡುವುದರಿಂದ, ಈ ಕಷ್ಟವರಿಹಾರವಾಗುತ್ತದೆ ಎಂದು ತಿಳಿದು ಕೇಂದ್ರ ಸರ್ಕಾರದ ಜೊತೆ ವ್ಯವಹಾರ ಮಾಡಿ, ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಹಾಸನ ಜಿಲ್ಲೆಯಲ್ಲಿ ಕೆಲವು ಪ್ರಯೋಗಗಳನ್ನು ನಾವು ಮಾಡುತ್ತಾ ಇದ್ದೇವೆ. ಅದೇ ಪ್ರಯೋಗವನ್ನು ಎಲ್ಲಾ ಕಡೆಯಲ್ಲಿಯೂ ಅನುಸರಿಸಿ, ಇವರಿಗೆ ಸಹಾಯಸಿಕ್ಕುವಹಾಗೆ ಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶವಾಗಿದೆ.

ಅಧ್ಯಕ್ಷರು:- ಹಿಮಾಚಲ ಪ್ರದೇಶದ ವಿಧಾನ ಸಭಾಧ್ಯಕ್ಷರಾದ ಶ್ರೀ ಠಾಕೂರ್‌ಸೇನ್ ನೇಗೆಯವರು, ವಿಧಾನ ಸಭೆಯ ಅಧ್ಯಕ್ಷರ ವೀಕ್ಷಕರ ಗ್ಯಾಲರಿಯಲ್ಲಿ ಕುಳಿತು ನಮ್ಮ ಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸುತ್ತಿದ್ದಾರೆ. ಈ ಸಭೆಯ ಎಲ್ಲಾ ಸದಸ್ಯರ ಪರವಾಗಿ, ಅವರನ್ನು ಸ್ವಾಗತಿಸುತ್ತೇನೆ.

ವಿಷಯ:- ರಸಗೊಬ್ಬರದ ವಿತರಣೆಗಾಗಿ ಕೇಂದ್ರದಿಂದ ಬಿಡುಗಡೆಮಾಡಿದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೫೧:- (೯೩)
ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)
ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಸಗೊಬ್ಬರಗಳ ಮೇಲಿನ ಸಬ್ಸಿಡಿ ಕೇಂದ್ರ ಸರ್ಕಾರ ವಾಪಸ್ ಪಡೆದ ನಂತರ ರಾಜ್ಯದ ರೈತರಿಗೆ ರಸಗೊಬ್ಬರದ ವಿತರಣೆಗಾಗಿ ಕೇಂದ್ರ ಸರ್ಕಾರದಿಂದ ಇವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು?

ಆ) ಇದರಲ್ಲಿ ಇದುವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಇ) ಎಷ್ಟು ಜನ ರೈತರಿಗೆ ಇದರಿಂದ ಪ್ರಯೋಜನವಾಗಿದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ
(ಕೃಷಿ ಸಚಿವರು)

ಕೇಂದ್ರ ಸರ್ಕಾರ ರಂಜಕ, ಪೊಟಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ರದ್ದುಪಡಿಸಿ ಅವುಗಳನ್ನು ಅನಿಯಂತ್ರಣ ಗೊಳಿಸಿದ ಮೇಲೆ ಉಂಟಾದ ಬೆಲೆ ಹೆಚ್ಚಳದ ಹೊರೆಯನ್ನು ತಗ್ಗಿಸಲು ಈ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಎಲ್ಲಾ ರೈತರಿಗೂ ರಿಯಾಯಿತಿ ದರದಲ್ಲಿ ಈ ರಸಗೊಬ್ಬರಗಳನ್ನು ವಿತರಣೆ ಮಾಡಲು ಕೇಂದ್ರ ಸರ್ಕಾರವು ರಾಜ್ಯಕ್ಕೆ ೧೭.೫೩ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇದಲ್ಲದೆ ಸಣ್ಣ ಮತ್ತು ಅತಿಸಣ್ಣ ರೈತರಿಗಾಗಿ ಪ್ರತ್ಯೇಕವಾಗಿ ೨೭.೯೦ ಕೋಟಿ ರೂಪಾಯಿಗಳ ನೆರವನ್ನು ಘೋಷಿಸಿದ್ದು, ಈ ಪೈಕಿ ೧೫.೭೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಎಲ್ಲಾ ರೈತರಿಗೂ ರಿಯಾಯಿತಿ ದರದಲ್ಲಿ ರಸಗೊಬ್ಬರಗಳನ್ನು ವಿತರಣೆ ಮಾಡಲು ನೀಡಿರುವ ೧೭.೫೩ ಕೋಟಿ ರೂಪಾಯಿಗಳ ಪೈಕಿ ಜನವರಿ ೧೯೯೩ರ ಅಂತ್ಯದವರೆಗೆ ೧೧.೯೮ ಕೋಟಿ ರೂಪಾಯಿಗಳನ್ನು ಉಪಯೋಗಿಸಲಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗಾಗಿ ನೀಡಿರುವ ನೆರವನ್ನು ೧೯೯೩-೯೪ರ ಸಾಲಿನಲ್ಲಿ ಉಪಯೋಗಿಸಲಾಗುವುದು.

ನವೆಂಬರ್ ೧೯೯೨ರಿಂದ ೨.೫೯ ಲಕ್ಷ ಟನ್ನುಗಳಷ್ಟು ಗೊಬ್ಬರವನ್ನು ರಿಯಾಯಿತಿ ದರದಲ್ಲಿ ಮಾರುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು. ಜನವರಿ ೯೩ರ ಅಂತ್ಯದವರೆಗೆ, ಈಗಾಗಲೇ ೧೧.೯೮ ಕೋಟಿ ರೂ.ಗಳ ಸಹಾಯಧನವನ್ನು ಉಪಯೋಗಿಸಿಕೊಂಡು ೧.೬೭ ಲಕ್ಷ ಟನ್ನುಗಳಷ್ಟು ಗೊಬ್ಬರವನ್ನು ವಿತರಿಸಲಾಗಿದೆ. ಈ ಕಾರ್ಯಕ್ರಮವು ಇನ್ನು ಜಾರಿಯಲ್ಲಿರುವುದರಿಂದ ಫಲಾನುಭವಿಗಳ ಸಂಖ್ಯೆಯನ್ನು ಸದ್ಯದಲ್ಲಿ ತಿಳಿಸಲು ಕಷ್ಟವಾಗುತ್ತದೆ. ಯೋಜನೆ ಪೂರ್ಣಗೊಂಡಂತರ ಈ ವಿವರಗಳು ಲಭ್ಯವಾಗುವುದು. ಆದರೆ ರಾಜ್ಯದಲ್ಲಿ ನೀರಾವರಿ ಸೌಲಭ್ಯವಿರುವ ೧೩.೪೪ ಲಕ್ಷ ಕೃಷಿ ಕುಟುಂಬಗಳಿಗೇ ಈ ಯೋಜನೆಯ ಫಲ ದೊರೆಯಬಹುದೆಂದು ನಿರೀಕ್ಷಿಸಲಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶ್ರೀ ಬಿ.ಎಸ್. ಯಡಿಯೂರಪ್ಪನವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ವಿದೇಶಿ ತಾಳಕ್ಕೆ ಕುಣಿದು ರಸಗೊಬ್ಬರದ ಸಬ್ಸಿಡಿ ವಾಪಸ್ ಪಡೆದಿದ್ದು ಎಲ್ಲರಿಗೂ ಗೊತ್ತಿದೆ. ಇದರಿಂದ ಈಗಿನ ಗೊಬ್ಬರದ ದರದಿಂದ ರೈತರಿಗೆ ಗೊಬ್ಬರ ಮುಟ್ಟಿದರೆ ಬೆಂಕಿ ಮುಟ್ಟಿದಂತೆ ಆಗುತ್ತದೆ. ಇಂತಹ ಸಂದರ್ಭದಲ್ಲಿ ನಾನು ರಾಜ್ಯ ಸರ್ಕಾರವನ್ನು ಕೇಳುವುದು ಇಷ್ಟೇ. ಇದರಲ್ಲಿ ೨೭.೯೦ ಕೋಟಿ ರೂಪಾಯಿಗಳು ಘೋಷಿಸಿದ್ದು, ೧೫.೭೦ ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಈಗಾಗಲೇ ನೆರೆಹಾವಳಿ, ಸೊಸೈಟಿಯಿಂದ ಬಲವಂತವಾಗಿ ಸಾಲ ವಸೂಲಿ, ಬೆಳದಂತಹ ಬೆಳೆಗೆ ಸರಿಯಾದ ಬೆಲೆ ಇಲ್ಲದೆ, ಬೆಳೆಯನ್ನು ಖರೀದಿ ಮಾಡದೆ, ಹತ್ತಿ ಖರೀದಿ ಮಾಡದೆ ಇರುವಂತಹ ಸಮಸ್ಯೆಗಳಿಂದ ರಾಜ್ಯದ ರೈತರು ಒದ್ದಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ತಮ್ಮನ್ನು ಮೊದಲನೇ ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಣ್ಣ ಅತಿ ಸಣ್ಣ ರೈತರಿಗೆ ೮ ಕೋಟಿ ರೂಪಾಯಿಗಳು ಬಿಡುಗಡೆ ಮಾಡಿಲ್ಲವೆಂದು ಹೇಳಿದ್ದಾರೆ. ಅಂದರೆ ಗೊಬ್ಬರದ ಹಣವನ್ನೇ ನುಂಗಿಬಿಟ್ಟಿದ್ದಾರೆ ಎಂದು ಅರ್ಥವಾಗುತ್ತದೆ. ಅದಕ್ಕೋಸ್ಕರ ನಾನು ಸ್ಪಷ್ಟವಾಗಿ ಕೇಳುವುದು ಇಷ್ಟೇ ಇನ್ನು ಉಳಿದಂತಹ ಹಣವನ್ನು ಯಾವಾಗ ಬಿಡುಗಡೆ ಮಾಡುವ ಪ್ರಯತ್ನವನ್ನು ತಾವು ಮಾಡುತ್ತೀರಿ ? ಮತ್ತೆ ಫಲಾನುಭವಿಗಳ ಪಟ್ಟಿ ಕೊಡುವುದಕ್ಕೆ ಕಷ್ಟ ಎಂದು ತಿಳಿಸಿದ್ದೀರಿ. ಇದು ತುಂಬಾ ಆಶ್ಚರ್ಯವಾಗುತ್ತದೆ. ಈ ಸಂದರ್ಭದಲ್ಲಿ ಬದುಕುವುದಕ್ಕಾಗದೆ ಒದ್ದಾಡುತ್ತಿದ್ದಾನೆ. ಗೊಬ್ಬರದ ಸಬ್ಸಿಡಿ ವಾಪಸ್ ತೆಗೆದುಕೊಂಡನಂತರ ಗೊಬ್ಬರ ಹಾಕುವುದಕ್ಕೆ ತುಂಬ ಕಷ್ಟಪಡುವಂಥ ಸ್ಥಿತಿಗೆ ರಾಜ್ಯದ ರೈತ ಬಂದಿರಬೇಕಾದರೆ ಈ ಪಟ್ಟಿ ತಮ್ಮ ಕೈಗೆ ಸಿಕ್ಕಿಲ್ಲವೆಂದರೆ ಇದು ತುಂಬ ದುರಾದೃಷ್ಟ. ಅದಕ್ಕೆ ನಾನು ನಿಮ್ಮನ್ನು ಸ್ಪಷ್ಟವಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಯಾವಾಗ ಈ ಪಟ್ಟಿಯನ್ನು ಒದಗಿಸುತ್ತೀರಿ ? ಉಳಿದಂತಹ ಹಣ ಯಾವಾಗ ಬಿಡುಗಡೆ ಮಾಡುತ್ತೀರಿ ? ಮತ್ತೆ ಸರ್ಕಾರದಿಂದ ಬಂದಿರತಕ್ಕಂಥ ಉತ್ತರದಲ್ಲಿ ೨.೩೮ ಲಕ್ಷ

ಟನ್ ಗೊಬ್ಬರದಲ್ಲಿ ೧.೬೭ ಲಕ್ಷ ಟನ್ ಗೊಬ್ಬರ ಮಾತ್ರ ವಿತರಣೆ ಮಾಡಿದ್ದೇವೆಂದು ಹೇಳಿದ್ದೀರಿ. ಈರೀತಿ ಬಂದಿರತಕ್ಕಂಥ ಗೊಬ್ಬರವನ್ನು ವಿತರಣೆ ಮಾಡುವುದಕ್ಕೆ ತೊಂದರೆ ಏನೋ ನನಗೆ ಅರ್ಥವಾಗುತ್ತಿಲ್ಲ. ಈ ಹಣ ಯಾವಾಗ ಬಿಡುಗಡೆ ಮಾಡುತ್ತೀರಿ. ಆ ಪಟ್ಟಿಯನ್ನು ಯಾವಾಗ ತಯಾರು ಮಾಡುತ್ತೀರಿ? ಇದನ್ನು ಸಮಯಕ್ಕೆ ಸರಿಯಾಗಿ ಅಂದರೆ ಮಾನ್ಸೂನಿಗೆ ಮುಂಚೆ ಕೊಟ್ಟರೆ ಲಾಭವಾಗುತ್ತದೆ. ಇಲ್ಲದಿದ್ದರೆ ಖಂಡಿತವಾಗಿ ಉಪಯೋಗವಾಗುವುದಿಲ್ಲ. ಸಮಯಕ್ಕೆ ಸರಿಯಾಗಿ ಇದನ್ನು ಕೊಡುವಂಥ ಪ್ರಯತ್ನ ಮಾಡುತ್ತೀರಾ? ಈ ಪ್ರಶ್ನೆಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಮಾನ್ಯ ಅಧ್ಯಕ್ಷರೆ, ಗೊಬ್ಬರಗಳ ಮೇಲೆ ಇದ್ದಂತಹ ಸಬ್ಸಿಡಿ ತೆಗೆದ ಮೇಲೆ ಕೇಂದ್ರ ಸರ್ಕಾರದ ಜೊತೆ ವ್ಯವಹಾರ ಮಾಡಿ ಇದರಿಂದ ರೈತರಿಗೆ ಬಹಳ ಅನಾನುಕೂಲವಾಗಿದೆ, ಇಳುವರಿ ಕೂಡ ಬಹಳ ಮಟ್ಟಿಗೆ ಕಡಿಮೆಯಾಗಿ ಆಹಾರಧಾನ್ಯಗಳ ಕೊರತೆಯುಂಟಾಗುತ್ತದೆ ಎನ್ನುವ ವಾದವನ್ನು ನಾವು ಮಾಡಿ ಅವರನ್ನು ಕೇಳಿದಾಗ ಮೊಟ್ಟಮೊದಲು ೧೭ ಕೋಟಿ ಚಿಲ್ಲರೆ ದುಡ್ಡು ಕೊಟ್ಟಿದ್ದಾರೆ. ಅದನ್ನು ಯಾವ ರೀತಿಯಲ್ಲಿ ಕೊಡಬೇಕು, ಯಾರ್ಯಾರಿಗೆ ಕೊಡಬೇಕು ಎಂದು ವಿವರವಾಗಿ ತಿಳಿಸಿ ದುಡ್ಡು ಕೊಟ್ಟಿದ್ದಾರೆ. ಅವರು ಹೇಳಿದಂತೆ ಏನೇನು ಕ್ರಮಗಳು ಇವೆ ಅವುಗಳನ್ನು ಅನುಸರಿಸಿ ಜನವರಿ ಅಖೈರು ಒಳಗಾಗಿ ೧೩ ಕೋಟಿ ಚಿಲ್ಲರೆ ರೂಪಾಯಿಗಳನ್ನು ಈಗಾಗಲೆ ಖರ್ಚು ಮಾಡಿದ್ದೇವೆ. ಈ ಹಣವನ್ನು ಮಾರ್ಚ್ ಅಖೈರು ಒಳಗಾಗಿ ಖರ್ಚು ಮಾಡಬೇಕು ಎಂದು ತಿಳಿಸಿದ್ದಾರೆ. ಅದರಂತೆ ನಾವು ಮಾಡುತ್ತಿದ್ದೇವೆ. ಇದಲ್ಲದೆ ಇನ್ನೊಂದು ೩೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ೩೬ ಕೋಟಿ ರೂಪಾಯಿಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರ ಸಹಾಯಕ್ಕೋಸ್ಕರ ಕೊಡಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಇದು ಏಪ್ರಿಲ್ ಒಂದನೇ ತಾರೀಖಿನಿಂದ ಜಾರಿಗೊಳಿಸಿ ಡಿಸೆಂಬರ್ ಅಖೈರು ಒಳಗಾಗಿ ಈ ಕೆಲಸವನ್ನು ಮುಗಿಸಬೇಕೆಂದು ಯೋಚನೆ ಮಾಡಿದ್ದೇವೆ. ಅದು ಅಲ್ಲದೆ ನಮಗೆ ಎಷ್ಟೊಂದು ಅನಾನುಕೂಲವಾಗಿದೆ, ಯಾವ ರೀತಿಯಲ್ಲಿ ಮಾಡಬೇಕು ಅದನ್ನು ತಿಳಿಸಿ ಇಂತಿಂತಹ ಬಾಬುಗಳಿಗೆ ಖರ್ಚು ಮಾಡಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಅದನ್ನು ನಾವು ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಅದಕ್ಕೆ ತಕ್ಕಂತಹ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಇದಲ್ಲದೆ ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿಗಳನ್ನು ನಾನು ಮತ್ತು ಪಾರ್ಲಿಮೆಂಟ್ ಸದಸ್ಯರು ಸಹ ಹೋಗಿ ಭೇಟಿ ಮಾಡಿ ಈ ತೊಂದರೆ ಇಷ್ಟು ಹೆಚ್ಚಾಗಿದೆ ನೀವೇನು ನಿರೀಕ್ಷೆ ಮಾಡುತ್ತಿದ್ದೀರೊ ಅದು ಸಾರ್ಥಕವಾಗುವುದಿಲ್ಲ. ನಾವು ಎಷ್ಟೇ ಪ್ರಯತ್ನಮಾಡಿದರೂ ರೈತರಿಗೆ ಸಮಾಧಾನವಾಗುವುದಿಲ್ಲ, ಜೊತೆಗೆ ಅವರು ಅಗತ್ಯವಾಗಿ ಎಷ್ಟು ಬೆಳೆಯಬೇಕೊ ಅಷ್ಟು ಬೆಳೆಯವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ರೈತರು ಸ್ಪಷ್ಟವಾಗಿ ತಿಳಿಸಿದ್ದಾರೆಂದು ನಾವು ಹೇಳಿದ ಮೇಲೆ ಅದನ್ನು ನಾವು ಆಲೋಚನೆ ಮಾಡುತ್ತೇನೆ ಎಂದು ನಮಗೆ ಭರವಸೆ ಕೊಟ್ಟಿದ್ದಾರೆ. ಆ ವಿಷಯದಲ್ಲಿ ನಮಗೆ ವಿಶ್ವಾಸ ಇದೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಇಂತಿಂಥ ಕಾರ್ಯಕ್ಕೆ ಇಷ್ಟಿಷ್ಟು ಹಣವನ್ನು ಬಿಡುಗಡೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆಂದು ಸನ್ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅಯಿತು ಒಪ್ಪುತ್ತೇನೆ. ನನ್ನ ಮೂಲಭೂತ ಪ್ರಶ್ನೆ ಏನೆಂದರೆ, ನೀವು ಯಾರಿಗೆ ಕೊಡಬೇಕೆಂಬ ಪಟ್ಟಿಯೇ ನಿಮ್ಮ ಹತ್ತಿರ ಇಲ್ಲ. ಯಾರಿಗೆ ಕೊಡಬೇಕು ಎಂಬ ಪಟ್ಟಿಯೇ ನಿಮ್ಮ ಹತ್ತಿರ ಇಲ್ಲದಿದ್ದರೆ ಹೇಗೆ ಖರ್ಚು ಮಾಡಬೇಕೆಂದು ತೀರ್ಮಾನ ಮಾಡುತ್ತೀರಿ? ಆಮೇಲೆ ಫಲಾನುಭವಿಗಳ ಸಂಖ್ಯೆಯನ್ನು ಸ್ಪಷ್ಟದಲ್ಲಿ ತಿಳಿಸಲು ಕಷ್ಟವಾಗುತ್ತದೆಂದು ಹೇಳುತ್ತಿದ್ದೀರಿ. ಫಲಾನುಭವಿಗಳ ಪಟ್ಟಿಯೇ ನಿಮಗೆ ಸಿಕ್ಕಲಿಲ್ಲವೆಂದರೆ ಹೇಗೆ ಹಣ ಖರ್ಚು ಮಾಡುತ್ತೀರಿ? ನಾನು ಅದಕ್ಕೋಸ್ಕರ ಕೇಳುತ್ತಿದ್ದೇನೆ. ರಾಜ್ಯಸರ್ಕಾರಕ್ಕೆ ಈ ರಾಜ್ಯದ ರೈತರ

ಬಗ್ಗೆ ಕಳಕಳಿ ಇಲ್ಲ. ಏನು ಮಾಡಬೇಕು? ಹೇಗೆ ಖರ್ಚು ಮಾಡಬೇಕು ಎಂಬ ಬಗ್ಗೆ ಪಟ್ಟಿ ತಯಾರು ಮಾಡಿಲ್ಲ. ಎಷ್ಟು ಹಣ ಬೇಕೆಂದು ನಿಮಗೇ ಗೊತ್ತಿಲ್ಲ. ಇದರಿಂದ ಸಮಯಕ್ಕೆ ಸರಿಯಾಗಿ ಕೊಡುವುದಕ್ಕಾಗುತ್ತಿಲ್ಲ. ಇದರಿಂದ ರಾಜ್ಯದ ರೈತರು ಬದುಕುವುದಕ್ಕಾಗುತ್ತದೆಯೇ? ಪಟ್ಟಿಯಾವಾಗ ಮಾಡುತ್ತೀರಿ? ಮತ್ತು ಯಾವ ಯಾವ ರೀತಿಯಲ್ಲಿ ಖರ್ಚು ಮಾಡುತ್ತೀರಿ? ಪಟ್ಟಿಯನ್ನು ಯಾವಾಗ ಫೈನಲ್ ಮಾಡುತ್ತೀರಿ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ:- ಸಣ್ಣ ಮತ್ತು ಅತಿ ಸಣ್ಣ ರೈತರ ಪಟ್ಟಿ ನಮ್ಮ ಹತ್ತಿರ ಇದೆ. ಈ ವಿಷಯದಲ್ಲಿ ತಾವು ಏನು ಅನುಮಾನ ಇಟ್ಟುಕೊಳ್ಳಬೇಕಾದಿಲ್ಲ. ಅವರಿಗೆ ಕೊಡುವುದಾದರೆ ಯಾರು ಯಾರಿಗೆ, ಯಾವ ಯಾವ ಭಾಗಕ್ಕೆ ಈ ದುಡ್ಡು ಕೊಡಬೇಕೆನ್ನುವ ವಿಷಯದಲ್ಲಿ ಕೆಲವು ನಿಬಂಧನೆಗಳು ಇವೆ. ಈಗ ಬಾವಿ ತೆಗೆದು ನೀರು ಬರದೆ ಫೇಲ್ ಆಗಿದ್ದರೆ ಅವರಿಗೆ ಎಷ್ಟು ದುಡ್ಡು ಕೊಡಬೇಕೆಂದು ಇದೆ. ಹೇಗೆ ಕೆಲವು ಇಂತಿಂಥಾ ಬಾಬುಗಳಿಗೆ ಈ ದುಡ್ಡು ಕೊಡಬೇಕೆನ್ನುವುದನ್ನು ಅನುಸರಿಸಿ ಯಾರು ಯಾರಿಗೆ ಕೊಡಬೇಕೆನ್ನುವುದನ್ನು ಸ್ಪಷ್ಟವಾಗಿ ಸರ್ಕಾರ ತಿಳಿದುಕೊಂಡಿರುವುದರಿಂದ ಆ ಕ್ರಮವಾಗಿ ನಾವು ಹಂಚುತ್ತೇವೆ.

ಶ್ರೀ ಹೆಚ್. ವಿಶ್ವನಾಥಯ್ಯ:- ಈ ಪ್ರಶ್ನೆ ಏನೆಂದರೆ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮತ್ತು ಬೇರೆ ರೈತರಿಗೂ ಸಹಾ ಅನೇಕ ನಿಬಂಧನೆಗಳ ಮೇಲೆ ಈ ಒಂದು ಪರಿಹಾರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ನಿಬಂಧನೆಗಳೇನು ಎಂಬುದನ್ನು ನಾನು ತಿಳಿಯಬಯಸುತ್ತೇನೆ. ನಿಬಂಧನೆಗಳ ಪ್ರಕಾರ ಏನು ತಾವು ಸಹಾಯ ಧನವನ್ನು ಕೊಡಬೇಕೆಂದು ಹೇಳುತ್ತೀರಿ, ಆ ನಿಬಂಧನೆಗಳು ಜಾರಿ ಮಾಡಲಿಕ್ಕೆ ಸಾಧ್ಯವಾಗದೆ ಇರುವಂಥ ನಿಬಂಧನೆಗಳಾದ್ದರಿಂದ, ಕಷ್ಟಕರವಾದಂಥ ನಿಬಂಧನೆಗಳಾದ್ದರಿಂದ ಇಲ್ಲಿಯವರೆಗೂ ಸರ್ಕಾರ ಈ ಹಣವನ್ನು ಖರ್ಚು ಮಾಡಲಿಕ್ಕಾಗಿಲ್ಲ ಎಂಬುದು ನಿಜವೆ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ:- ಕೇಂದ್ರ ಸರ್ಕಾರವು ಕೊಟ್ಟಿದ್ದಂಥ ೧೭ ಕೋಟಿ ರೂಪಾಯಿಯಲ್ಲಿ ಈಗ ೧೧ ಕೋಟಿ ರೂಪಾಯಿ ಜನವರಿ ಅಖೈರೊಳಗಾಗಿ ಖರ್ಚಾಗಿದೆ. ಆಮೇಲೆ ಪುನಃ ೩೬ ಕೋಟಿ ರೂಪಾಯಿಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಏನು ಕೊಟ್ಟಿದ್ದಾರೆ ಅದನ್ನು ಏಪ್ರಿಲ್ ಒಂದನೇ ತಾರೀಖಿನಿಂದ ಕೊಡುವುದಕ್ಕೆ ಆಲೋಚನೆ ಮಾಡಿದ್ದೇವೆ. ಈ ವರ್ಷದ ಡಿಸೆಂಬರ್ ಅಖೈರೊಳಗಾಗಿ ನಾವು ಕೊಡಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಯಾವಾಗ ರೈತರಿಗೆ ಹಣ ಬೇಕಾಗುತ್ತದೋ ಅಷ್ಟು ಮುಂಚೆಯೇ ಕೊಡುತ್ತೀರೋ ಹೇಗೆ? ತಡವಾಗಿ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ರೈತರಿಗೆ ಯಾವಾಗ ಬೇಕೋ ಅಷ್ಟು ಮುಂಚೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಸ್ತಿಗೌಡ:- ಆ ಹಣವನ್ನು ಕೊಟ್ಟ ಮೇಲೆ ಅದನ್ನು ಯಾವ ತಾರೀಖಿನಿಂದ ಖರ್ಚು ಮಾಡಬೇಕೆಂದು ಹೇಳಿ ನಾವು ನಿರ್ಧರಿಸಿಕೊಂಡಿರುವುದರ ಜೊತೆಗೆ ರೈತರ ಅನುಕೂಲ, ಅನನುಕೂಲವನ್ನು ತಿಳಿದುಕೊಂಡು ಡೇಟ್ ಫಿಕ್ಸ್ ಮಾಡಿದ್ದೇವೆ. ಅದರಂತೆ ನಾವು ಖರ್ಚು ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ನಾನು ಒಂದೇ ಒಂದು ಪ್ರಶ್ನೆ ಕೇಳುತ್ತೇನೆ. ಈ ಗೊಬ್ಬರದ ಮಾರಾಟವನ್ನು ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿ ಮಾರ್ಕೆಟಿಂಗ್ ಫೆಡರೇಷನ್‌ಗೆ ಕೊಟ್ಟಿದ್ದಾರೆ. ನೀವು ಏನು ಮಾಡಿದ್ದೀರಿ ಎಂದರೆ, ಕಂಪನಿಗಳಿಗೆ ಹಂಚಿಬಿಟ್ಟಿದ್ದೀರಿ. ಕಂಪನಿಗಳಿಗೆ ಹಂಚಿಬಿಟ್ಟಿರುವ ಸಲುವಾಗಿ ಆ ಕಂಪನಿಗಳಿಂದ ಗೊಬ್ಬರವನ್ನು ತೆಗೆಸಿಕೊಳ್ಳಲೇಬೇಕು. ಇಂಥಾದ್ದು ಇಲ್ಲಾಗಿದೆ. ಮುಂದೆಯೂ ಹಾಗೆ ಮಾಡುತ್ತಿರೋ ಅಥವಾ ಮುಂದಿನ ನೀತಿ ಏನಿದೆ ಎಂದು ಸ್ಪಷ್ಟವಾಗಿ ಹೇಳಬೇಕು. ಏಕೆಂದರೆ ನೀವು ಎಲ್ಲಾ ಕಂಪನಿಗಳಿಗೆ ಸಬ್ಸಿಡಿಯನ್ನು

ಹಂಚಿಬಿಟ್ಟಿದ್ದೀರಿ. ಬೇರೆ ಜಿಲ್ಲೆಗಳಲ್ಲಿ ಹಾಗೆ ಮಾಡಿಲ್ಲ. ಮಾರಾಟ ಮಹಾ ಮಂಡಳಿಗೆ ಅವರು ಕೊಟ್ಟಿದ್ದಾರೆ. ಇಲ್ಲಿ ಪ್ರೈವೇಟ್ ಕಂಪನಿಗಳಿಗೆ ಸಮನಾಗಿ ಹಂಚ್ಚಿಬಿಟ್ಟಿದ್ದೀರಿ. ಅದಕ್ಕೆ ನಿಮ್ಮ ನೀತಿ ಏನಿದೆ ಎಂದು ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:- ಕಂಪನಿಗೆ ಹಂಚಿಬಿಟ್ಟಿದ್ದೀರೆಂದು ಹೇಳುತ್ತೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ೧೭ ಕೋಟಿ ರೂಪಾಯಿ ಸಬ್ಸಿಡಿ ಬಂದಿದೆಯಲ್ಲಾ ಅದನ್ನು ತಾವು ಎಲ್ಲಾ ಕಂಪನಿಗಳಿಗೆ ಸಮನಾಗಿ ಹಂಚಿಬಿಟ್ಟಿದ್ದೀರಿ. ಅವರ ಹತ್ತಿರ ನಾವು ಗೊಬ್ಬರ ತೆಗೆದುಕೊಳ್ಳಬೇಕು. ಅದಕ್ಕಾಗಿ ನಾನು ಇವತ್ತು ಏನು ಹೇಳುತ್ತೇನೆಂದರೆ, ಮಹರಾಷ್ಟ್ರ ಮತ್ತು ಆಂಧ್ರದಲ್ಲಿ ಮಾರಾಟ ಮಹಾ ಮಂಡಳಿಗೆ ದುಡ್ಡು ಕೊಟ್ಟಿದ್ದಾರೆ. ಹಾಗೆ ಇಲ್ಲಿ ಮಾಡಿಲ್ಲ. ಬೇರೆ ಬೇರೆ ಪ್ರೈವೇಟ್ ಕಂಪನಿಗಳಿಗೆ ಹಂಚಿಬಿಟ್ಟಿದ್ದೀರಿ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :- ಯಾರ ಮುಖಾಂತರ ಗೊಬ್ಬರವನ್ನು ವಿತರಣೆ ಮಾಡಬೇಕೆಂದು ಮೊದಲಿಂದ ಅನುಸರಿಸಿಕೊಂಡು ಬಂದಿದ್ದೇವೆಯೇ ಆ ಮಾರ್ಗದಲ್ಲೇ ಗೊಬ್ಬರ ಹಂಚುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅದು ಯಾರು? ಅದೇ ಇಲ್ಲಿ ತಪ್ಪಾಗಿದೆ ಸರಿಯಾಗಿ ಮಾಡಿಲ್ಲವೆಂದು ಹೇಳುತ್ತಿದ್ದೇನೆ. ಆ ವಿಜನ್ಸಿ ಯಾವುದು? ಯಾರ ಮುಖಾಂತರ ೧೭ ಕೋಟಿ ರೂಪಾಯಿ ಕೊಟ್ಟಿದ್ದೀರಿ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :- ಆ ವಿಷಯ ತಿಳಿದು ನಿಮಗೆ ತಿಳಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ವೆಂಕಟಪ್ಪನವರೇ, ತಮ್ಮ ಪ್ರಶ್ನೆಯು ವಾಣಿಜ್ಯ ಮತ್ತು ಕೈಗಾರಿಗಾ ಇಲಾಖೆಗೆ ವರ್ಗವಾಗಿದೆ. ಮಾನ್ಯ ಮಂತ್ರಿಗಳು ಒಂದು ಅವಶ್ಯಕ ಕೆಲಸದ ಮೇಲೆ ಹೊರಗಡೆ ಹೋಗಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ:- ಪುನಃ ಯಾವಾಗ ಇದನ್ನು ತೆಗೆದುಕೊಳ್ಳುತ್ತೀರಿ? ಮಾನ್ಯ ಮಂತ್ರಿಗಳ ವಿಷಯ ಬಂದಾಗ ನನ್ನ ಈ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿ.

ಅಧ್ಯಕ್ಷರು:- ಆಯಿತು.

ವಿಷಯ:- ನೆರೆಪೀಡಿತ ಪ್ರದೇಶಗಳಿಗೆ ಪರಿಹಾರ ನೀಡುವ ಬಗ್ಗೆ.

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.
ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೫೪:- (೬೭೫)
ಶ್ರೀ ಬಸುವರಾಜ ರಾಯರೆಡ್ಡಿ (ಯಲಬುರ್ಗ)

ಅ) ೧೯೯೩ ನೇ ಸಾಲಿನಲ್ಲಿ ನೆರೆಹಾವಳಿ ಪೀಡಿತ ಪ್ರದೇಶಗಳಿಗೆ ಪರಿಹಾರ ಕಾಮಗಾರಿ ಯೋಜನೆ ಅಡಿಯಲ್ಲಿ ವಿವಿಧ ಇಲಾಖೆಗಳಿಗೆ ಒದಗಿಸಿರುವ ಹಣ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ನೆರೆ ಹಾವಳಿಯಿಂದ ಕೃತರಿಗಾಗಿರುವ ಬೆಳೆ ಹಾನಿ ಎಷ್ಟು ಮತ್ತು ಇದಕ್ಕಾಗಿ ಎಷ್ಟು ಹಣವನ್ನು ಪರಿಹಾರ ನೀಡಲಾಗಿದೆ ಹಾಗೂ ಎಷ್ಟು ಎಕರೆ ಪ್ರದೇಶದಲ್ಲಿ ಬೆಳೆ ನಾಶವಾಗಿದೆ. (ಜಿಲ್ಲಾವಾರು ವಿವರ ನೀಡುವುದು)

ಇ) ನೆರೆ ಹಾವಳಿಯಿಂದ ಲೋಕೋಪಯೋಗಿ ಇಲಾಖೆಯ ರಸ್ತೆ ಮತ್ತು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬರುವ ರಸ್ತೆಗೆ ಎಷ್ಟು ಹಣ ನೀಡಲಾಗಿದೆ. (ಜಿಲ್ಲಾವಾರು ವಿವರ ನೀಡುವುದು)